ಉಪ ತಹಶೀಲ್ದಾರರನ್ನು ನೇಮಿಸುವ ಬಗ್ಗೆ

218(242); ಶ್ರೀ ಡಾ: ಮಾಲಕರಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ವಿಧಾನಸಭಾ ವ್ಯಾಪ್ತಿಯ ದೋರನಹಳ್ಳಿ ನಾಡ ಕಛೇರಿಯಲ್ಲಿ ಉಪ ತಹಶೀಲ್ದಾರರಿಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಈವರೆಗೆ ಉಪ ತಹಶೀಲ್ದಾರರ ನೇಮಕಕ್ಕೆ ಕ್ರಮ ಕೈಗೊಂಡಿಲ್ಲವೇ;

ಇ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ಸೂಕ್ತ ವ್ಯವಸ್ಥೆಗಳಿಲ್ಲದೇ ಸಮಾಜಕ್ಕೆ ಸಾರ್ವಜನಿಕರಿಗೆ ಉಪಯೋಗವಿಲ್ಲದ ಮೇಲೆ ಸದರಿ ಕಛೇರಿಗಳನ್ನು ಆರಂಭಿಸಿದ ಉದ್ದೇಶ ಬುಡಮೇಲಾಗುವುದಿಲ್ಲವೇ;

ಉ) ದೋರನ ಹಳ್ಳಿ ನಾಡಕಚೇರಿಗೆ ಉಪ ತಹಶೀಲ್ದಾರ್ ಮಟ್ಟದ ಅಧಿಕಾರಿ ನೇಮಿಸಲು ಸರ್ಕಾರ ಇನ್ನು ಎಷ್ಟು ದಿನಗಳಲ್ಲಿ ಕ್ರಮ ಕೈಗೊಳ್ಳಲಿದೆ;

ಶ್ರೀ. ವಿ ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಯಾದಗಿರಿ ವಿಧಾನಸಭಾ ವ್ಯಾಪ್ತಿಯ ದೋರನಹಳ್ಳಿ ನಾಡ ಕಛೇರಿಯಲ್ಲಿ ಉಪ ತಹಶೀಲ್ದಾರ್ ಹುದ್ದೆಯನ್ನು ಪ್ರಾದೇಶಿಕ ಆಯುಕ್ತರಿಂದ ಭರ್ತಿ ಮಾಡಲಾಗಿದ್ದು. ಈ ಹುದ್ದೆಯಲ್ಲಿ ನೌಕರರು ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಭೂ ಪರಿವರ್ತನೆ

220(234); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

ಅ) ಜನವರಿ 2013 ರಿಂದ ಡಿಸೆಂಬರ್ 2013 ರವರೆಗೆ ತುಮಕೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಎಷ್ಟು ಭೂಮಿಯನ್ನು ಯಾವ ಯಾವ ಉದ್ದೇಶಕ್ಕೆ ಭೂಪರಿವರ್ತನೆ ಮಾಡಲಾಗಿದೆ (ಮಾಹೆಯಾನ ವಿವರಗಳನ್ನು ಒದಗಿಸುವುದು)

ಶ್ರೀ. ವಿ ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ)

ಉತ್ತರ

(ವಿಸ್ತೀರ್ಣ: ಎಕರೆ/ ಗುಂಟೆಯಲ್ಲಿ

ಮಾಹೆ	ವಾಸ	ಗೋಡೌನ್	ಕೈಗಾರಿಕೆ	ಶೈಕ್ಷಣಿಕ	ವಾಣಿಜ್ಯ	ಒಟ್ಟು
ಜನವರಿ 2013	27–05	0–10	–	–	–	27–15
ಫೆಬ್ರವರಿ 2013	7–05	–	–	–	1–23	8–28
ಮಾರ್ಚ್ 2013	33–14 1/2	–	5–26	7–03 1/2	0–02 3/4	46–06 1/2
ಏಪ್ರಿಲ್	2–20	–	–	–	–	2–20